ಎಂಎಜಿ 352:95–96.

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಹಾಸನ ಜಿಲ್ಲೆ,
ಹಾಸನ, ದಿನಾಂಕ:06–10–1995.

1) ಜಿಲ್ಲೆಯ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳವರಿಗೆ.

2) ಉಪವಿಭಾಗಾಧಿಕಾರಿಗಳು, ಹಾಸನ : ಸಕಲೇಶಪುರ.

3) ಜಿಲ್ಲೆಯ ಎಲ್ಲಾ ತಹಶೀಲ್ದಾರರವರಿಗೆ.

ಮಾನ್ಯರೇ,

ವಿಷಯ:– ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ – 1995 ಧ್ವಜ ದಿನಾಚರಣೆ ಸ್ಮರಣ ಸಂಚಿಕೆಯಲ್ಲಿ ಜಾಹಿರಾತನ್ನು ಪ್ರಕಟಿಸಲು – ಹಾಗೂ ದೇಣಿಗೆಯ ಸಂಗ್ರಹ ಕುರಿತು.

ಉಲ್ಲೇಖ:– ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ಬೆಂಗಳೂರು ರವರ ಅ.ಸಂ.ಪ ಸಂಖ್ಯೆ:ಸೈಕಪುಇ ಧ್ವಜ 3 ಡಿಎಸ್ಪಿ 95; ದಿನಾಂಕ 13–07–95.

oooooo

ಸಶಸ್ತ್ರ ಪಡೆಯ ಧ್ವಜ ದಿನಾಚರಣೆಯನ್ನು ರಾಷ್ಟ್ರಾದ್ಯಂತ ಪ್ರತೀ ವರ್ಷ ಡಿಸೆಂಬರ 7ರಂದು ಆಚರಿಸಲಾಗುತ್ತಿದೆ. ಈ ಅಂಗವಾಗಿ ಸಾಂಕೇತಿಕ ಹಾಗೂ ವಾಹನ ಧ್ವಜಗಳನ್ನು ಜನರಿಗೆ ವಿತರಿಸಿ ಮಾಜೀ ಯೋಧರು, ಯುದ್ಧದಲ್ಲಿ ಮಡಿದ ಯೋಧರ ವಿಧವೆಯರು ಅವರ ಅವಲಂಬಿತರ ಕಲ್ಯಾಣ ಮತ್ತು ಪುನರ್ವಸತಿಗಾಗಿ ನಿಧಿ ಸಂಗ್ರಹಿಸಲಾಗುತ್ತಿರುವುದು ನಿಮಗೆ ತಿಳಿದ ವಿಷಯವೇ ಆಗಿದೆ. ಈ ಸಂದರ್ಭದಲ್ಲಿ ಒಂದು ಆಕರ್ಷಕ ಸ್ಮರಣ ಸಂಚಿಕೆಯನ್ನು ಹೊರತರಲಾಗುತ್ತಿದ್ದು, ಉದ್ಯೋಗಪತಿಗಳು, ವ್ಯಾಪಾರಿ ಸಂಸ್ಥೆಗಳು, ದಾನ ಶೀಲ ವ್ಯಕ್ತಿಗಳು ಮತ್ತು ಸಂಸ್ಥೆಗಳು ಜಾಹಿರಾತಿನ ಮೂಲಕ ಅವರ ಸಂಸ್ಥೆಯ ವ್ಯಾಪಾರ ಹೆಸರು ವೃದ್ಧಿಯಾಗಲು ಹಾಗೂ ಈ ಜಾಹಿರಾತಿನ ಹಣದಿಂದ ಸೈನಿಕರ ಕಲ್ಯಾಣ ಯೋಜನೆಗೆ ಹಣವು ಸಂಗ್ರಹಣೆಯು ಆಗುತ್ತದೆ. ಆದುದರಿಂದ ಈ ಸ್ಮರಣ ಸಂಚಿಕೆಯಲ್ಲಿ ಜಾಹಿರಾತನ್ನು ನೀಡಲು ಪ್ರೇರೇಪಿಸಿ ಧ್ವಜ ನಿಧಿಯ ಸಂಗ್ರಹಣೆಗೆ ಸಹಕರಿಸಲು ಕೋರುತ್ತೇನೆ. ಜಾಹಿರಾತುಗಳ ದರ ಈ ಕೆಳಗಿನಂತಿದೆ.

| | |
|---|---|
| (ಅ) 1 ಪುಟಕ್ಕೆ | ರೂ.2500–00 |
| (ಆ) $\frac{1}{2}$ .. | ರೂ.1500–00 |
| (ಇ) $\frac{1}{4}$ .. | ರೂ. 800–00 |

ಜಾಹಿರಾತು ಮಾಡಬೇಕಾದ ವಿವರಗಳೊಂದಿಗೆ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಇವರ ಪರವಾಗಿ ಸೂಕ್ತ ಧನಾದೇಶ ಹುಂಡಿಯನ್ನು ಪಡೆದು ನಂ.58, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಭವನ, ಹಾಗೂ ರಸ್ತೆ, ಬೆಂಗಳೂರು –560 025 ಕ್ಕೆ ದಿನಾಂಕ:31–10–95ರೊಳಗಾಗಿ ಕಳುಹಿಸಲು ಕೋರಿದೆ.

ಅಲ್ಲದೆ ಸಂಸ್ಥೆಗಳು – ಉದ್ಯೋಗ ಪತಿಗಳು, ಸಾರ್ವಜನಿಕರು, ದೇಣಿಗಳನ್ನು ಸಹ ನೀಡಬಹುದಾಗಿದೆ. 250–00ಕ್ಕೆ ಮೇಲ್ಪಟ್ಟು ನೀಡಿದ ದೇಣಿಗೆಯು ಆದಾಯ ತೆರಿಗೆ ಕಾಯಿದೆ 15ಬಿ ಅನ್ವಯ ಆದಾಯ ತೆರಿಗೆಯಿಂದ ವಿನಾಯಿತಿ ಇರುತ್ತದೆ. ಆದುದರಿಂದ ಈ ಬಗ್ಗೆ ಜಿಲ್ಲೆಯಲ್ಲಿರುವ ಉದ್ಯೋಗಪತಿ, ಸಂಸ್ಥೆ ಹಾಗೂ ಸಾರ್ವಜನಿಕರನ್ನು ಸಂಪರ್ಕಿಸಿ ಹೆಚ್ಚಿನ ಸಂಖ್ಯೆಯಲ್ಲಿ ಹಣ ಸಂಗ್ರಹಿಸಿ ನಿಗಧಿತ ವೇಳೆಗೆ ಸಂಬಂಧಪಟ್ಟವರಿಗೆ ಕಳುಹಿಸಲು ಹೆಚ್ಚಿನ ಆಸಕ್ತಿ ವಹಿಸುವಿರಾಗಿ ನಂಬುತ್ತೇನೆ. ಈ ಬಗ್ಗೆ ಪ್ರಗತಿಯನ್ನು ಸಹ ನನ್ನ ಗಮನಕ್ಕೆ ತರಲು ಕೋರುತ್ತೇನೆ.

ತಮ್ಮ ನಂಬುಗೆಯ,

(ಕರಡು ಪ್ರತಿ ಜಿಲ್ಲಾಧಿಕಾರಿಗಳಿಂದ ಅನುಮೋದಿಸಿದೆ)